ದಿನಾಂಕ 10-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀ ಡಿ.ಬಿ.ಎಸ್ ವಕೀಲರವರಿಂದಃ

ಅಪಘಾತವಾಗಿದೆ ಎಂದು ಹೇಳುವ ಬಗ್ಗೆ ನೀವು ದೂರು ನೀಡಿರುವುದಿಲ್ಲ ಎಂದರೆ ಹೌದು. ಅಪಘಾತವು ಎನ್ ಹೆಚ್ 66 ರಾ. ಹೆದ್ದಾರಿಯ ಪಕ್ಕದಲ್ಲಿರುವ ಮಣ್ಣಿನ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಆಗಿದೆ ಎಂದು ಹೇಳುವ ಸ್ಥಳವು ರಾ. ಹೆದ್ದಾರಿಯ ಪಶ್ಚಿಮ ಬದಿಯಿಂದ ಪೂರ್ವ ಬದಿಗೆ ಎಷ್ಟು ಅಂತರದಲ್ಲಿ ಆಗಿರುತ್ತದೆ ಎಂದರೆ 2-3 ಮೀ ಅಂತರದಲ್ಲಿ ಆಗಿದೆ. ರಾ. ಹೆದ್ದಾರಿಯ ಪಶ್ಚಿಮ ಬದಿಯಿಂದ ಪೂರ್ವ ಬದಿಗೆ 2-3 ಮೀ ಅಂತರದಲ್ಲಿ ಅಪಘಾತವಾಗಿದೆ ಎನ್ನುವ ವಿಷಯವನ್ನು ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಅಥವಾ ನಿಮ್ಮ ಮುಖ್ಯ ವಿಚಾರಣೆಯನ್ನು ಸಲ್ಲಿಸುವ ಕಾಲದಲ್ಲಿ ನಿಮ್ಮ ಗೌರವಾನ್ವಿತ ವಕೀಲರಿಗೆ ತಿಳಿಸಿರುತ್ತೀರಾ ಎಂದರೆ ತಿಳಿಸಿರುತ್ತೇನೆ. ಅಪಘಾತವಾಗಿದೆ ಎಂದು ಹೇಳುವ ಸ್ಥಳದಲ್ಲಿರುವ ರಸ್ತೆಯ ಪಶ್ಚಿಮ ಅಂಚಿನಲ್ಲಿರುವ ಮಣ್ಣಿನ ರಸ್ತೆಯು 1 ಲಾರಿ ನಿಲ್ಲಿಸುವಷ್ಟು ಅಗಲವಾಗಿರುತ್ತದೆಯೇ ಎಂದರೆ ಒಂದು ಬೈಕು ನಿಲ್ಲಿಸುವಷ್ಟು ಅಗಲವಾಗಿರುತ್ತದೆ.

ನಿಪಿ 1 ನ್ನು ನೀವು ಓದಿ ಹಾಕಿರುವುದು ಅಲ್ಲವೇ ಎಂದರೆ ಹೌದು. ನಿಪಿ 1 ರಲ್ಲಿ ಬರೆದಿರುವ ವಾಚಕಗಳ ಬಗ್ಗೆ ನಿಮ್ಮ ತಕರಾರು ಇರುವುದಿಲ್ಲ ಎಂದರೆ ಇರುವುದಿಲ್ಲ. ನಿಮಗೆ ಮತ್ತು ಪೊಲೀಸಿನವರಿಗೆ ವೈಮನಸ್ಸು ಮತ್ತು ತಕರಾರು ಇರುವುದಿಲ್ಲ ಎಂದರೆ ಇರುವುದಿಲ್ಲ. ನಿಪಿ 1 ರ ಕೊನೆಯ ಕಂಡಿಕೆಯಲ್ಲಿ " ರಾ. ಹೆದ್ದಾರಿ 66 ನೇ ಸಾರ್ವಜನಿಕ ಡಾಂಬಾರು ರಸ್ತೆಯಲ್ಲಿ ಅಂದರೆ ಕರಾವಳಿ ಕಡೆಯಿಂದ ಸಂತೆಕಟ್ಟೆ ಕಡೆಗೆ ವಾಹನಗಳು ಏಕಮುಖವಾಗಿ ಸಂಚರಿಸುವ ರಸ್ತೆಯ ಪಶ್ಚಿಮ ದಿಕ್ಕಿನ ಅಂಚಿನಿಂದ ಸುಮಾರು 4 ಅಡಿ ದೂರ ಪೂರ್ವಕ್ಕೆ ಪಾದಾಚಾರಿ ಮಾರ್ಗದಲ್ಲಿ ಆಗಿರುತ್ತದೆ " ಎಂದು ನಮೂದಿಸಲಾಗಿದೆ ಅಲ್ಲವೇ ಎಂದರೆ ಹೌದು. ಸದರಿ ಭಾಗವನ್ನು ನಿ. ಆರ್ 1 ಎಂದು ಗುರುತಿಸಲಾಯಿತು. ನಿಮ್ಮ ವಿರುದ್ಧ ಪೊಲೀಸಿನವರು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು.

ಪೊಲೀಸಿನವರು ಸರಿಯಾಗಿ ತನಿಖೆಯನ್ನು ಮಾಡಿ ನಿಮ್ಮ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು. ಪ್ರಥಮ ವರ್ತಮಾನ ವರದಿ ಮತ್ತು ದೋಷಾರೋಪಣಾ ಪಟ್ಟಿಯನ್ನು ಹಾಜರು ಮಾಡದೇ ಇರಲು ಏನು ಕಾರಣ ಎಂದರೆ ಗೊತ್ತಿಲ್ಲ.

ಸಾಕ್ಷಿಯವರಿಗೆ ಒಂದು ದಾಖಲೆಯನ್ನು ತೋರಿಸಿ ಪೊಲೀಸಿನವರು ನಿಮ್ಮ ವಿರುದ್ಧ ಸಲ್ಲಿಸಿರುವ ದೋಷಾರೋಪಣಾ ಪಟ್ಟಿ ಇದೇ ಅಲ್ಲವೇ ಎಂದು ಸೂಚಿಸಿದ್ದು ಅದನ್ನು ಸಾಕ್ಷಿಯವರು ಗುರುತಿಸಿದ್ದು ಅದನ್ನು ನಿ. ಆರ್ 2 ಎಂದು ಗುರುತಿಸಲಾಯಿತು. ನಿಮ್ಮ ಮೇಲೆ ಪೊಲೀಸಿನವರು ಸಲ್ಲಿಸಿರುವ ಕ್ರಿಮಿನಲ್ ಪ್ರಕರಣ ದಲ್ಲಿ ನೀವು ನ್ಯಾಯಾಲಯಕ್ಕೆ ಹಾಜರಾಗಿರುತ್ತೀರಿ ಅಲ್ಲವೇ ಎಂದರೆ ಹೌದು. ನೀವು ಕ್ರಿಮಿನಲ್ ಪ್ರಕರಣ ದಂಡವನ್ನು ಪಾವತಿ ಮಾಡಿರುತ್ತೀರಿ ಅಲ್ಲವೇ ಎಂದರೆ ಹೌದು. ಸಾಕ್ಷಿಯವರಿಗೆ ಅವರು ಹಾಜರು ಮಾಡಿರುವ ದಾಖಲೆಗಳನ್ನು ನೀಡಿ ನೀವು ಹಾಜರು ಮಾಡಿರುವ ಈ ದಾಖಲೆಗಳಲ್ಲಿ ಕಾರಿನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ತೋರಿಸುವ ದಾಖಲೆಗಳು ಇರುವುದಿಲ್ಲ ಎಂದರೆ ಹೌದು. ಕಾರಿನ ಚಾಲಕರು ತಮ್ಮ ಕಾರನ್ನು ಡಾಂಬಾರು ರಸ್ತೆಯ ಬದಿಯಲ್ಲಿರುವ ಮಣ್ಣಿನ ರಸ್ತೆಯಲ್ಲಿ ಪಾರ್ಕಿಂಗ್ ಲೈಟನ್ನು ಹಾಕಿ ನೀವು ಮೋಟಾರ್ ಬೈಕನ್ನು ಚಾಲನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿರುವುದು ಎಂದರೆ ಸರಿಯಲ್ಲ. ಕಾರಿನ ಹಿಂಬದಿಗೆ ನಿಮ್ಮ ಮೋಟಾರ್ ಬೈಕ್ ಡಿಕ್ಕಿಯಾಗಿರುವುದು ಎಂದರೆ ಹೌದು.

ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ಕಾರು ನಿಂತಿತ್ತು ಎಂದರೆ ಹೌದು. ಅಪಘಾತವಾಗಿದೆ ಎಂದು ಹೇಳುವ ಸ್ಥಳದಿಂದ ಸುಮಾರು 18 ರಿಂದ 20 ಅಡಿ ರಾ. ಹೆದ್ದಾರಿಯು ಬಲಭಾಗಕ್ಕೆ ಇರುತ್ತದೆ ಎಂದರೆ ಹೌದು. ನೀವು ಆ ದಿನ ಮಂಗಳೂರು ಕಡೆಯಿಂದ ಸಂತೆಕಟ್ಟೆ ಕಡೆಗೆ ಬರುವವರಿದ್ದೀರಾ ಎಂದರೆ ಹೌದು.

ನೀವು ಬರುವಾಗ ಎದುರಿನಲ್ಲಿ ಮಣ್ಣಿನ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರನ್ನು ಗಮನಿಸದೆ ಡಿಕ್ಕಿಯಾಗಿರುವುದು ಎಂದರೆ ಸರಿಯಲ್ಲ. ಅಪಘಾತವು ನಿಮ್ಮ ತಪ್ಪಿ ನಿಂದಲೇ ಆಗಿರುತ್ತದೆ ಎನ್ನುವ ಅರಿವು ನಿಮಗೆ ಇದ್ದ ಕಾರಣದಿಂದ ಪೊಲೀಸಿನವರಿಗೆ ದೂರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ನೀವು ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಡಿಗ್ರಿ ಪದವೀದರ ಆಗಿರುತ್ತೇನೆ. ನಿಮ್ಮ ಮನೆಯಲ್ಲಿ ಎಲ್ಲರೂ ವಿದ್ಯಾವಂತರು ಎಂದರೆ ಹೌದು. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಅಪಘಾತವು ಯಾವ ರೀತಿಯಲ್ಲಿ ಆಗಿರುತ್ತದೆ ಎಂದು ಹೇಳಿರುತ್ತಿರೋ ಆ ವಿಷಯವನ್ನು ನಿಮ್ಮ ಮನೆಯರಿಗೆ ತಿಳಿಸಿರುತ್ತೀರಾ ಎಂದರೆ ತಿಳಿಸಿರುತ್ತೇನೆ. ಅಪಘಾತವಾದ ವಿಷಯವನ್ನು ನೀವಾಗಲೀ ನಿಮ್ಮ ಮನೆಯವರಾಗಲೀ ಪೊಲೀಸಿನವರಿಗೆ ಲಿಖಿತವಾಗಿ ತಿಳಿಸಿರುವುದಿಲ್ಲ ಎಂದರೆ ಹೌದು.

ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿಯಲ್ಲಿ ಅಪಘಾತವು ಆಗಿರುವುದಿಲ್ಲ ನಿಮ್ಮ ತಪ್ಪಿ ನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಅಪಘಾತವನ್ನು ನೋಡಿದವರು ಯಾರಾದರೂ ಇದ್ದಾರೆಯೇ ಎಂದರೆ ಇರುವುದಿಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿಯಲ್ಲಿ ಅಪಘಾತವು ಆಗಿದೆ ಎಂದು ಸಾಬೀತು ಪಡಿಸಲು ಯಾರನ್ನಾದರೂ ಸಾಕ್ಷಿಯನ್ನಾಗಿ ವಿಚಾರಣೆ ಮಾಡುತ್ತೀರಾ ಎಂದರೆ ಇಲ್ಲ.

ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿ ನೀವು ಏನು ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಮುತ್ತೂಟ್ ಫೈನಾನ್ಸ್ ನಲ್ಲಿ ಕೆಲಸವನ್ನು ಮಾಡುತ್ತಿದ್ದೆ.

ಈಗ ನೀವು ಏನು ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಯಾವುದೇ ಕೆಲಸ ಮಾಡುತ್ತಿಲ್ಲ. ನೀವು ಯಾವ ಕಾರಣದಿಂದ ಕೆಲಸ ಮಾಡುತ್ತಿಲ್ಲ ಎಂದರೆ ನಾನು 4 ತಿಂಗಳ ಕಾಲ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ  ಕಾರಣ ಕೆಲಸದಿಂದ ತೆಗೆದುಹಾಕಿದರು ಈಗ ಪ್ರಯತ್ನ ಪಡುತ್ತಿದ್ದೇನೆ  ಕೆಲಸ ಸಿಕ್ಕಿಲ್ಲ. ಮುತ್ತೂಟ್ ಪೈನಾನ್ಸ್ ನವರು ಕೆಲಸದಿಂದ ತೆಗೆಯುವ ಕಾಲದಲ್ಲಿ  ಸರಿಯಾದ ಕಾರಣ ಕೊಟ್ಟು ಕೆಲಸದಿಂದ ತೆಗೆಯುತ್ತಾರಾ ಎಂದರೆ ಹೌದು. ಅಪಘಾತದಿಂದ ಆಗಿದೆ ಎಂದು ಹೇಳುವ  ಗಾಯಗಳಿಂದಾಗಿ  ನಿಮಗೆ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳಿ ಮುತ್ತೂಟ್ ಪೈನಾನ್ಸ್ ನವರು ನಿಮಗೆ ಪತ್ರವನ್ನು ನೀಡಿರುತ್ತಾರೆಯೇ ಎಂದರೆ ಇಲ್ಲ. ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳಿಂದಾಗಿ ನಿಮ್ಮನ್ನು ಮುತ್ತೂಟ್ ಪೈನಾನ್ಸ್  ನವರು ಕೆಲಸದಿಂದ ತೆಗೆದಿರುತ್ತಾರೆ ಎಂದು ನೀವು ಬಾಯಿಮಾತಿನಲ್ಲಿ  ಹೇಳುವುದನ್ನು  ಹೊರತುಪಡಿಸಿ ದಾಖಲೆಗಳು ಇಲ್ಲ ಎಂದರೆ ಹೌದು.  ಅಪಘಾತವಾಗಿದೆ ಎಂದು ಹೇಳುವ ದಿನಕ್ಕೆ ಮೊದಲು ಮುತ್ತೂಟ್ ಪೈನಾನ್ಸ್ ನಲ್ಲಿ ನೀವು ಕೆಲಸಮಾಡುತ್ತಿದ್ದೀರಿ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಇರುತ್ತದೆ. ಅಪಘಾತವಾಗಿದೆ ಎಂದು ಹೇಳುವ ನಂತರ ಮುತ್ತುಾಟ್ ಪೈನಾನ್ಸ್ ಗೆ  ಹೋಗಿ ಕೆಲಸ ಮಾಡುತ್ತೇನೆ ಎಂದು ಹೇಳಿ ಪ್ರಯತ್ನ ಮಾಡಿರುವುದು ಉಂಟೇ ಎಂದರೆ ಉಂಟು.

ಅಪಘಾತವಾಗಿದೆ ಎಂದು ಹೇಳುವ ನಂತರ ಮುತ್ತೂಟ್ ಪೈನಾನ್ಸ್ ನಲ್ಲಿ ನಂತರ ಕೆಲಸಕ್ಕೆ ಸೇರಿಕೊಳ್ಳಲು ಹೋಗುವ ಸಮಯದಲ್ಲಿ ನಿಮಗೆ ಚಿಕಿತ್ಸೆ  ನೀಡಿದ ವೈದ್ಯರಿಂದ ಪ್ರಮಾಣ ಪತ್ರವನ್ನು  ತೆಗೆದುಕೊಡು ಹೋಗಿರುತ್ತೀರ ಎಂದರೆ ಹೌದು.  ಅಪಘಾತವಾಗಿದೆ ಎಂದು ಹೇಳುವ ಸಮಯಕ್ಕೆ ಮೊದಲು ಮುತ್ತುಾಟ್ ಪೈನಾನ್ಸ್ ನಲ್ಲಿ ಖಾಯಂ ನೌಕರರಾಗಿ

ಕೆಲಸ ಮಾಡುತ್ತಿದ್ದೀರಾ ಅಥವಾ ತಾತ್ಕಾಲಿಕ ನೌಕರನಾಗಿ ಕೆಲಸ ಮಾಡುತ್ತಿದ್ದೀರಾ ಎಂದರೆ ಇಂಟೆನ್ ಶಿಪ್ ರೀತಿಯಲ್ಲಿ ಕೆಲಸ ಮಾಡುತ್ತಿದ್ದೆನು, ವೇತನ ಕೊಡುತ್ತಿದ್ದರು. ಇಂಟೆನ್ ಶಿಪ್ ಅವದಿಯಲ್ಲಿ ವೇತನ ನೀಡುವುದಿಲ್ಲ ಶಿಷ್ಯ ವೇತನ ರೀತಿಯಲ್ಲಿ ಹಣವನ್ನು ನೀಡುವುದು ಎಂದರೆ ಸರಿಯಲ್ಲ.

ನಿಮಗೆ ತಿಂಗಳಿಗೆ 15 ಸಾವಿರ ರೂ ಸಂಬಳ ಸಿಗುತ್ತಿತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅಪಘಾತವಾಗಿದೆ ಎಂದು ಹೇಳುವ ಎಲ್ಲಾ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿದೆ ಎಂದರೆ ಸರಿಯಲ್ಲ. ನಿಮಗೆ ಆರೋಗ್ಯ ವಿಮೆಯು ಇತ್ತೇ ಎಂದರೆ ಸುಮಾರು 3 ಲಕ್ಷ ರೂಗಳು ಖರ್ಚು ಆಗಿರುತ್ತದೆ ಸುಮಾರು 60 ಸಾವಿರ ರೂಗಳು ಅಯುಷ್ಮಾನ್ ಯೋಜನೆ ಹಣದಲ್ಲಿ ಬಂದಿರುತ್ತದೆ, ಉಳಿದ ಹಣವನ್ನು ಕೈಯಿಂದ ಹಾಕಿರುತ್ತೇನೆ. ನೀವು ಆಸ್ಪತ್ರೆ ಮತ್ತು ಔಷದಕ್ಕೆ ಖರ್ಚು ಮಾಡಿರುತ್ತೇನೆ ಎಂದು ಹೇಳುವ ಎಲ್ಲಾ ಹಣವು ವಿಮೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ.

ನಿಮಗೆ ದ್ವಿ ಚಕ್ರ ವಾಹನ ಚಾಲನೆ ಮಾಡಲು ವಾಹನ ಚಾಲನಾ ಪರವಾನಿಗೆ ಇತ್ತೇ ಎಂದರೆ ಇತ್ತು. ಅದನ್ನು ಹಾಜರು ಪಡಿಸಬಹುದೇ ಎಂದರೆ ಪಡಿಸಬಹುದು. ಅಪಘಾತದಲ್ಲಿ ನಿಮಗೆ ತಲೆಗೆ ಪೆಟ್ಟು ಆಗಿತ್ತೇ ಎಂದರೆ ಆಗಿರಲಿಲ್ಲ. ಕಾಲು ಮತ್ತು ಕೈ ಗೆ ಪೆಟ್ಟು ಆಗಿತ್ತು. ಮೋಟಾರ್ ಸೈಕಲಿಗೆ ಹಾನಿಯಾಗಿತ್ತೇ ಎಂದರೆ ಹೌದು. ಮೋಟಾರ್ ಬೈಕಿಗೆ ವಿಮಾ ಕಂಪನಿಯಿಂದ ಹಣವನ್ನು ಪಡೆದುಕೊಂಡಿರುತ್ತೀರಾ ಎಂದರೆ ಹೌದು. ನಿಮ್ಮ ಅರ್ಜಿ ಹಾಗೂ ಮುಖ್ಯ ವಿಚಾರಣೆಯಲ್ಲಿ ನೀವು ಹೇಳಿರುವಷ್ಟು ಹಣವು ಔಷದಿಗೆ, ಆಹಾರಕ್ಕೆ ಓಡಾಟಕ್ಕೆ, ಪರಿಚಾರಕರಿಗೆ, ಖರ್ಚಾಗಿಲ್ಲವೆಂದರೆ ಸರಿಯಲ್ಲ. ನಿಮ್ಮ ವಯಸ್ಸು ಎಷ್ಟು ಎಂದರೆ 23 ವರ್ಷ. ನಿಮ್ಮ 10 ನೇ ತರಗತಿಯ ಅಂಕಪಟ್ಟಿಯನ್ನು ಹಾಜರುಮಾಡಬಹುದೇ ಎಂದರೆ ಹಾಜರುಮಾಡಬಹುದು.

ನಿಮಗೆ 26 ವರ್ಷ ಆಗಿತ್ತು ಆ ಕಾರಣದಿಂದ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.    ಅಪಘಾತವು ನಿಮ್ಮ ತಪ್ಪಿ ನಿಂದಲೇ ಆಗಿರುವುದರಿಂದ 2 ನೇ ಎದ್ರುದಾರರು ಯಾವುದೇ  ಪರಿಹಾರ ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ.   ಉಡುಪಿ.